# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ ...

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE: 23/6/2020

# ಎಂಎಲ್ಸಿ ನಾಮನಿರ್ದೇಶನ ಕಸರತ್ತು ಈಗ ಆರಂಭ

## ಜಯಮಾಲಾ ಸೇರಿ ಐವರ ಅವಧಿ ಅಂತ್ಯ
## ಜಗ್ಗೇಶ್, ಯೋಗಿ, ಸುರಾನಾ ರೇಸಲ್ಲಿ

• ಕನ್ನಡಪ್ರಭ ವಾರ್ತೆ ಬೆಂಗಳೂರು

ಹಿಂದಿನ ಸಿಎಂ ಸಿದ್ದರಾಮಯ್ಯ ಅವಧಿಯಲ್ಲಿ ವಿಧಾನ ಪರಿಷತ್‌ಗೆ ನಾಮನಿರ್ದೇಶನಗೊಂಡಿದ್ದ 5 ಸದಸ್ಯರ ಅವಧಿ ಮಂಗಳವಾರ ಅಂತ್ಯ ಆಗಲಿದ್ದು, ಇದೀಗ ಬಿಜೆಪಿ ಸರ್ಕಾರ ಹೊಸದಾಗಿ ನಾಮನಿರ್ದೇಶನ ಮಾಡಬೇಕಾಗಿದೆ.



ಪರಿಷತ್ ಸದಸ್ಯರಾದ ಡಾ. ಜಯಮಾಲ ರಾಮಚಂದ್ರ, ಐವನ್ ಡಿಸೋಜಾ, ಅಬ್ದುಲ್ ಜಬ್ಬಾರ್, ತಿಪ್ಪಣ್ಣ ಕಮಕನೂರು ಹಾಗೂ ಇಕ್ಬಾಲ್ ಅಹಮದ್ ಸರಡಗಿ ಅವರ ಅವಧಿ ಮಂಗಳವಾರ ಪೂರ್ಣಗೊಳ್ಳಲಿದೆ.

ಇದರ ಬೆನ್ನಲ್ಲೇ ಆಡಳಿತಾರೂಢ ಬಿಜೆಪಿಯಲ್ಲಿ ಲೆಕ್ಕಾಚಾರ ಆರಂಭವಾಗಿದ್ದು, ಐದು ಸ್ಥಾನಗಳಿಗೆ ಯಾರನ್ನು ಆಯ್ಕೆ ಮಾಡಬೇಕು ಎಂಬುದರ ಬಗ್ಗೆ ಸಿಎಂ ಯಡಿಯೂರಪ್ಪ ಅವರು ಪಕ್ಷದ ವರಿಷ್ಠರೊಂದಿಗೆ ಸಮಾಲೋಚನೆ ನಡೆಸಿ ತೀರ್ಮಾನ ಕೈಗೊಳ್ಳಲಿದ್ದಾರೆ. ಈ ಬಾರಿ ಸಂಘ ಪರಿವಾರದ ಹಿನ್ನೆಲೆಯುಳ್ಳವರಿಗೆ ಮತ್ತು ಪಕ್ಷದ ಹಿರಿಯ ಕಾರ್ಯಕರ್ತರಿಗೆ ಆದ್ಯತೆ ಸಿಗಲಿದೆ ಎಂದು ತಿಳಿದು ಬಂದಿದೆ. ➜8

# ನಾಮನಿರ್ದೇಶನ ಕಸರತ್ತು ಆರಂಭ

➜ ಮೊದಲ ಪುಟದಿಂದ

**ತಿಂಗಳಾಂತ್ಯಕ್ಕೆ ನೇಮಕ?:** ಆದರೆ, ತಕ್ಷಣಕ್ಕೆ ನೇಮಕ ಮಾಡಲಾಗುತ್ತದೆಯೇ ಎಂಬುದರ ಬಗ್ಗೆ ಬಿಜೆಪಿ ಪಾಳೆಯದಿಂದ ಸ್ಪಷ್ಟ ಚಿತ್ರಣ ಹೊರಬಿದ್ದಿಲ್ಲ. ಮೇಲಾಗಿ ತಕ್ಷಣಕ್ಕೆ ನೇಮಕ ಮಾಡಬೇಕು ಎಂಬ ನಿಯಮವೂ ಇಲ್ಲ. ಆದರೆ, ಇದೇ ತಿಂಗಳಾಂತ್ಯದೊಳಗೆ ಪಕ್ಷದ ರಾಜ್ಯ ನಾಯಕರು ಹಾಗೂ ವರಿಷ್ಠರೊಂದಿಗೆ ಚರ್ಚಿಸಿ ಮುಂದಿನ ಹೆಜ್ಜೆ ಇಡಲಿದ್ದಾರೆ ಎಂದು ವಿಶ್ವಾಸನೀಯ ಮೂಲಗಳು ತಿಳಿಸಿವೆ. ಈ ತನಕ ವಿಧಾನಪರಿಷತ್ ನಾಮನಿರ್ದೇಶನಕ್ಕೆ ಸಂಬಂಧಿಸಿ ಗಂಭೀರವಾದ ಚರ್ಚೆ ಶುರು ಆಗಿಲ್ಲ. ಆದರೆ, 5 ಸ್ಥಾನಗಳ ಪೈಕಿ 2 ಅಥವಾ 3 ಹೆಸರುಗಳು ವರಿಷ್ಠರೇ ಸೂಚಿಸುವ ಸಾಧ್ಯತೆ ಇದೆ ಎಂದು ಪಕ್ಷದ ಹಿರಿಯ ನಾಯಕ ರೊಬ್ಬರು 'ಕನ್ನಡಪ್ರಭ'ಕ್ಕೆ ಮಾಹಿತಿ ನೀಡಿದರು.

**ಯಾರ ಹೆಸರು ಚಾಲ್ತಿಯಲ್ಲಿ?:** ಪಕ್ಷದ ಉಪಾಧ್ಯಕ್ಷ ನಿರ್ಮಲ್‌ಕುಮಾರ್ ಸುರಾನಾ, ಮಾಜಿ ಶಾಸಕ ಸಿ.ಪಿ.ಯೋಗೇಶ್ವರ್, ನಟ ಹಾಗೂ ಮಾಜಿ ಶಾಸಕ ಜಗ್ಗೇಶ್, ಪಕ್ಷದ ಸಹ ವಕ್ತಾರೆ ಹಾಗೂ ನಟಿ ಮಾಳವಿಕಾ ಅವಿನಾಶ್ ಮೊದಲಾದವರ ಹೆಸರುಗಳು ಕೇಳಿಬರುತ್ತಿವೆ. ಜೊತೆಗೆ ವಿಧಾನಸಭೆಯಿಂದ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಟಿಕೆಟ್ ವಂಚಿತ ಮಾಜಿ ಸಚಿವ ಎಚ್.ವಿಶ್ವನಾಥ್ ಅವರಿಗೂ ಸಾಹಿತಿಗಳ ಕೋಟಾದಡಿ ಅವಕಾಶ ಕಲ್ಪಿಸುವ ಬಗ್ಗೆ ಸಿಎಂ ಕಾನೂನು ತಜ್ಞರ ಅಭಿಪ್ರಾಯ ಸಂಗ್ರಹಿಸುತ್ತಿದ್ದಾರೆ ಎನ್ನಲಾಗಿದೆ.